





ನಗಾರು

ನಮ್ಮ ಚಾರಣದ ಅವಧಿ ಒಟ್ಟು 11 ದಿನಗಳು. ಬೇಸ್ ಕ್ಯಾಂಪ್‌ನಲ್ಲಿ ಕ್ಯಾಂಪಿನ ನಿರ್ದೇಶಕರೇ ಎಲ್ಲರಿಗೂ ಬಾಸ್. ಅವರ ಜೊತೆಗೆ ಹಲವರು ಸ್ವಯಂ ಸೇವಕರಾಗಿ ದುಡಿಯುತ್ತಾರೆ. ನಿರಂತರವಾಗಿ 30 ದಿವಸ ನಡೆಯುವ ಚಾರಣ. (ಮೇ 5ರಿಂದ ಜೂನ್ 15ರವರೆಗೆ). ದಿನಕ್ಕೊಂದು ಗ್ರೂಪ್ ಈ ಬೇಸ್ ಕ್ಯಾಂಪ್‌ನಿಂದ ಎತ್ತರದ ಕ್ಯಾಂಪ್‌ಗಳಿಗೆ ಸಾಗುತ್ತದೆ. ಪ್ರತಿಯೊಂದು ಗ್ರೂಪ್‌ಗಳಲ್ಲಿ 60 ರಿಂದ 70 ಜನ ಇರುತ್ತಾರೆ. ಇಲ್ಲೊಂದು ಮಿನಿಭಾರತವೇ ಸೃಷ್ಟಿಯಾಗಿರುತ್ತದೆ.

ಬೇಸ್ ಕ್ಯಾಂಪ್‌ನಲ್ಲಿ ಪ್ರತಿದಿನ ಒಂದು ಗ್ರೂಪ್‌ನವರು ಸಾಂಸ್ಕೃತಿಕ ಕಾರ್ಯಕ್ರಮ ನೀಡಬೇಕು. ನಮ್ಮದು ಈ ವರುಷದ 21ನೇ ಬ್ಯಾಚ್. ನಮ್ಮ ಗ್ರೂಪ್‌ನಲ್ಲಿ 60 ಜನ ಪ್ರತಿಭಾವಂತ ಯುವಕ ಯುವತಿಯರಿದ್ದರು. ಐಐಟಿ ವಿದ್ಯಾರ್ಥಿಗಳೂ ಇದ್ದರು. ಮಂಗಳೂರಿನಿಂದ ಎಂಟು ಜನರಿದ್ದೆವು. ನಮ್ಮ ಯುವಕರು ದಕ್ಷಿಣ ಕನ್ನಡದ ಹುಲಿವೇಷಕ್ಕೆ ಹೆಜ್ಜೆ ಹಾಕಿದರು. ಬೇಸ್ ಕ್ಯಾಂಪ್‌ನಲ್ಲಿ ಮೊದಲ ದಿನ ನೋಂದಣಿ ಇರುತ್ತದೆ. ನೋಂದಣಿ ನಂತರ ಸ್ಲೀಪಿಂಗ್ ಬ್ಯಾಗ್ ಮತ್ತು ಹೊದಿಕೆಗಳನ್ನು ಕೊಡುತ್ತಾರೆ. ಟೆಂಟ್ ಒದಗಿಸುತ್ತಾರೆ. ಒಂದು ಟೆಂಟ್‌ನಲ್ಲಿ 10 ರಿಂದ 12 ಜನ ಇರಬಹುದು.

ಮರುದಿನ ಬೆಳಿಗ್ಗೆ 6.30ಕ್ಕೆ ವ್ಯಾಯಾಮ. ಬೆಳಗ್ಗಿನ ಉಪಹಾರದ ನಂತರ ಸುಮಾರು 4 ಗಂಟೆ ಚಾರಣ ಮಾಡಿ ಬೇಸ್ ಕ್ಯಾಂಪ್‌ಗೆ ಮರಳಿದೆವು. ಮಧ್ಯಾಹ್ನದ ನಂತರ ಸರ್‌ಪಾಸ್ ಚಾರಣದ ಬಗ್ಗೆ ಕ್ಯಾಂಪ್ ನಿರ್ದೇಶಕರಿಂದ ಸುಮಾರು 2 ಗಂಟೆಗಳ ಕಾಲ ಮಾಹಿತಿ ಮತ್ತು ಮಾರ್ಗದರ್ಶನ. 3ನೇ ದಿನ ರಾಕ್ ಕ್ಲೈಂಬಿಂಗ್ ತರಬೇತಿ. ಮಧ್ಯಾಹ್ನ ಬಂಡೆ ಹತ್ತುವ ಮತ್ತು ಇಳಿಯುವ ತರಬೇತಿ. ಹೀಗೆ 3 ದಿನ ಬೇಸ್ ಕ್ಯಾಂಪ್‌ನಲ್ಲಿಯ ಪೂರ್ವಭಾವಿ ತಯಾರಿಗಳು ನಡೆಯುತ್ತವೆ. 4ನೇ ದಿವಸ ನಿಜವಾದ ಸರ್‌ಪಾಸ್ ಚಾರಣ ಪ್ರಾರಂಭವಾಗುತ್ತದೆ.

ಒಬ್ಬ ವ್ಯಕ್ತಿ 6 ಕೆ.ಜಿ ಗಿಂತ ಜಾಸ್ತಿಯಾದ ಬ್ಯಾಗ್ ಹೊರುವಂತಿಲ್ಲ. ಆದ್ದರಿಂದ 6 ದಿನಕ್ಕೆ 2 ಜೊತೆ ಬಟ್ಟೆ ಮತ್ತು ನಿತ್ಯೋಪಯೋಗಿ ವಸ್ತುಗಳು ಮಾತ್ರ. ಬ್ಯಾಗಿನ ಭಾರ ಜಾಸ್ತಿ ಇದ್ದಷ್ಟೂ ಚಾರಣ ಕಠಿಣ. ಮೊದಲ ಚಾರಣ 7700 ಅಡಿ ಎತ್ತರದ ಗ್ರಹಣ್ ಎಂಬ ಹಳ್ಳಿಗೆ ಸ್ಥಳೀಯ ಗೈಡ್‌ನೊಂದಿಗೆ ಪ್ರಾರಂಭವಾಯಿತು. ಶುರುವಿಗೆ ಪೈನ್ ಮರಗಳ ನೆರಳಿನಲ್ಲಿ, ತಗ್ಗಾದ ಪ್ರದೇಶದಿಂದ ಪ್ರಾರಂಭವಾಗುವ ಚಾರಣ ಮುಂದೆ ಎತ್ತರ ಎತ್ತರಕ್ಕೆ ಸಾಗುತ್ತದೆ. ಒಂದು ಬದಿಗೆ ಗ್ರಹಣ್‌ನಿಂದ ಹರಿದು ಬರುವ ನದಿ; ಇನ್ನೊಂದು ಬದಿಗೆ ನಮ್ಮ ಚಾರಣದ ಕೊರಕಲು ರಸ್ತೆ. ತಂಪಾದ ಪರಿಸರದಲ್ಲಿ ಕಾಯಿಲ್ ಎಂಬ ಮರದ ಹೂವಿನ ಪರಿಮಳದೊಂದಿಗೆ ಚಾರಣ ಮುಂದೆ ಸಾಗಿತು.

## ಗ್ರಹಣ್ ನೆರಳಲ್ಲಿ..

ಗ್ರಹಣ್ ಎಂಬ ಹಳ್ಳಿ ಒಂದು ಸುಂದರ ಪ್ರದೇಶ. 60 ರಿಂದ 70 ಮನೆಗಳಿರುವ ಪುಟ್ಟ ಹಳ್ಳಿ. ಹಳ್ಳಿಯಲ್ಲಿ ಒಬ್ಬ ಮಹಿಳೆ ಕೆಂಪುಬಣ್ಣದ ಶರಬತ್ತನ್ನು ಮಾರುತ್ತಿದ್ದಳು. ಅದು ಸ್ಥಳೀಯ ಬ್ರಾಸ್ ಅನ್ನುವ ಹೂವಿನಿಂದ ತಯಾರಿಸಿದ ಶರಬತ್ತು. ಇದು ಹಿಮಾಲಯದ ಪರ್ವತ ಶ್ರೇಣಿಗಳಲ್ಲಿ ಮಾತ್ರ ದೊರೆಯುತ್ತದೆ.

ಸುಮಾರು 200 ವರ್ಷಗಳ ಹಿಂದೆ ಮರದಿಂದ ನಿರ್ಮಿಸಿದ ಮನೆಗಳು ಇಲ್ಲಿ ಇನ್ನೂ ಇದ್ದು ಚಾವಣಿಗೆ ಬಳಪದ ಕಲ್ಲಿನ ಸಣ್ಣ ಚಪ್ಪಡಿಯನ್ನು ಪೇರಿಸಿಟ್ಟಿದ್ದಾರೆ. ಚಳಿಗಾಲದಲ್ಲಿ ಹಿಮಪಾತವಾದರೆ ಸಲೀಸಾಗಿ ಚಾವಣಿಯಿಂದ ಹಿಮ ಇಳಿದು ಹೋಗಲು ಈ ವ್ಯವಸ್ಥೆ. ಹಳ್ಳಿಯಲ್ಲಿ 1ರಿಂದ 8ನೇ ತರಗತಿವರೆಗೆ ಒಂದು ಸರಕಾರಿ ಶಾಲೆ ಇದೆ.

ಯಜ್ಞ ಮಹರ್ಷಿಯ ಕಲಾತ್ಮಕ ಮಂದಿರವೊಂದು ಗಮನ ಸೆಳೆಯಿತು. ಆದರೆ ಇಲ್ಲಿ ಸ್ಥಳೀಯ ರಾಜಪೂತ್, ಠಾಕೂರ್ ಜಾತಿಯವರಿಗೆ ಮಾತ್ರ ಪ್ರವೇಶ. ಸ್ಥಳೀಯ ಜನರು ಹೇಳುವ ಐತಿಹ್ಯದ ಪ್ರಕಾರ, ಯಜ್ಞವಾಲಿಕೆ ಅಥವಾ ರಾಬಲ್ ಋಷಿ, ಶಿಹಾಯು ಎಂಬ ಹಳ್ಳಿಯಿಂದ ಈ ಊರಿಗೆ ಬಂದವರು. ಈ ಋಷಿಯನ್ನು ಅನುಸರಿಸುವವರನ್ನು ಮನಿಹಾರಿ ಝೂಕ್ ಎಂದು ಕರೆಯುತ್ತಾರೆ. ಮನಾಲ ಎಂಬ ಹಳ್ಳಿಯಿಂದ ರೇಣುಕಾಮಾ ದೇವಿಯ ಭಕ್ತರೂ ಈ ಹಳ್ಳಿಗೆ ಬರುತ್ತಾರೆ. ಅವರನ್ನು ದೂಮ್ ಝೂಕ್ ಎನ್ನುತ್ತಾರೆ. ಇವರೂ ರಜಪೂತ್, ಠಾಕೂರ್ ವಂಶಸ್ಥರು. ಆದರೆ ಮನಿಹಾರ ಝೂಕ್‌ಗಳಿಗೆ ವಿಶೇಷ ಪ್ರಾಶಸ್ತ್ಯ. ಇವರ ನಡುವೆ ವೈವಾಹಿಕ ಸಂಬಂಧಗಳು ನೆರವೇರುತ್ತವೆ. ರೇಣುಕಾಮಾ ಮಂದಿರದ ದೇವಿಯ ದರ್ಶನ ವರ್ಷಕ್ಕೆ ಒಂದು ದಿನ ಸ್ವಲ್ಪ ಹೊತ್ತು ಮಾತ್ರ ಇರುತ್ತದೆ. ಉಳಿದ ದಿವಸ ದೇವಿಯ ಗರ್ಭಗುಡಿಯ ಬಾಗಿಲು ಮುಚ್ಚಿರುತ್ತಾರೆ. ಹೊರಗಿನಿಂದಲೇ ಪೂಜೆ ನೆರವೇರಿಸುತ್ತಾರೆ. ಫೆಬ್ರವರಿ ತಿಂಗಳು ಇಲ್ಲಿ ವಿಶೇಷ ಜಾತ್ರೆ ನೆರವೇರುತ್ತದೆ.

ಮಲಾನ ಹಳ್ಳಿಯಲ್ಲಿ ಇವತ್ತಿಗೂ ಜನ ಕೋರ್ಟ್, ಪೋಲಿಸ್ ಠಾಣೆಯ ಮೆಟ್ಟಲು ಹತ್ತುವುದಿಲ್ಲ. ಅಲ್ಲಿಯೇ ಅವರ ಹಳ್ಳಿಯ ಪ್ರಧಾನರ ಕೆಳಗಿನ ಕೋರ್ಟ್ ಮತ್ತು ಮೇಲಿನ ಕೋರ್ಟ್ ಇದೆ. ಇಲ್ಲಿಯ ಜನ ಹೊರಗಿನ ಜನಗಳೊಂದಿಗೆ ಬೆರೆಯುವುದಿಲ್ಲ. ನಮ್ಮ ಗೈಡ್ ಹೇಳುವ ಪ್ರಕಾರ, ಹೊರಗಿನಿಂದ ಠಾಕೂರ್ ಜಾತಿಯವರು ಅವರ ಗ್ರಾಮಕ್ಕೆ ಹೋದರೆ